ಆಲ್ಲೂರ(ಬಿ) : ಮೇ 1994ರ ಅಂತ್ಯದೊಳಗೆ ಪೂರ್ತಿಗೊಳಿಸಲಾಗುವುದು.
ಬೆಳಗೇರಾ ಮತ್ತು
ಸಂಕನೂರ : ಜುಲೈ 1994ರ ಅಂತ್ಯದೊಳಗೆ ಪೂರ್ತಿಗೊಳಿಸಲಾಗುವುದು.

ರಾಜ್ಯದಲ್ಲಿ ಎಪಿಎಂಸಿ ಚುನಾವಣೆಗಳನ್ನು ನಡೆಸುವುದು

629 - ಶ್ರೀ ಶಿವಾನಂದ ಪಟೇಲ್ ಕಾಜಲಗಿ (ಬೈಲಹೊಂಗಲ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಪಿಎಂಸಿ ಚುನಾವಣೆಗಳನ್ನು ಯಾವಾಗ ನಡೆಸಲಾಗುವುದು;

ಆ) ಎಪಿಎಂಸಿ ಚುನಾವಣೆಗಳನ್ನು ಬಹಳ ದಿನಗಳಿಂದ ನಡೆಸದೇ ಇರುವುದರಿಂದ ಎಪಿಎಂಸಿ ಆಡಳಿತ ಹದಗೆಡುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಸರ್ಕಾರದವರು ಎಪಿಎಂಸಿ ಚುನಾವಣೆಗಳನ್ನು ಕೂಡಲೇ ನಡೆಸಲು ಕ್ರಮಕೈಗೊಳ್ಳುವರೇ?

ಶ್ರೀ ಮದನಗೋಪಾಲ್ ನಾಯಕ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಚುನಾವಣೆ ನಡೆಸುವ ಅವಧಿಯು ಮುಂಬರುವ ಸಾರ್ವತ್ರಿಕ ಚುನಾವಣೆಗಳು ನಡೆಯುವ ಅವಧಿಯ ಸಮೀಪ ಬರುವ ಹಿನ್ನೆಲೆಯಲ್ಲಿ ಸರ್ಕಾರವು ಸದರಿ ಸಮಿತಿಗಳಿಗೆ ಚುನಾವಣೆ ನಡೆಸಲು ಸಾಧ್ಯವಾಗಲಾರದೆಂದು ಅಭಿಪ್ರಾಯಪಟ್ಟಿದೆ.

ಆ) ಇಲ್ಲ

ಇ) (ಅ)ವಲ್ಲಿಯ ಉತ್ತರವು ಇದಕ್ಕೂ ಸಂಬಂಧಿಸಿದೆ.

ರೈತರು ಸಬ್ಸಿಡಿ ಸೌಲಭ್ಯದಿಂದ ವಂಚಿತರಾಗಿರುವ ಬಗ್ಗೆ

633 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಂಕಲ್ ಪ್ರಸ್ತಾವನೆಗಳು ಜಾರಿಗೆ ಬಂದಲ್ಲಿ ಕೃಷಿ ಕ್ಷೇತ್ರದ ಮೇಲೆ ತೀವ್ರತರ ಪರಿಣಾಮ ಬೀಳುವುದು ನಿಜವೇ?

ಆ) ರಾಜ್ಯದ ರೈತರು ಸಬ್ಸಿಡಿ ಸೌಲಭ್ಯಗಳಿಂದ ವಂಚಿತರಾಗುವುದು ನಿಜವೇ?

ಇ) ಈ ಡಂಕಲ್ ಪ್ರಸ್ತಾವನೆಯನ್ನು ವಿರೋಧಿಸಿ, ರಾಜ್ಯ ಸರ್ಕಾರ ಏನಾದರೂ ನಿರ್ಧಾರ ಕೈಗೊಂಡಿದೆಯೇ?

ಈ) ಇಲ್ಲದಿದ್ದಲ್ಲಿ ರೈತರಲ್ಲಿ ಉಂಟಾಗಿರುವ ತೊಂದರೆ ಹಾಗೂ ಭೀತಿಯ ವಾತಾವರಣವನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎನ್. ಪುಟ್ಟಸ್ವಾಮಿಗೌಡ (ಕೃಷಿ ಸಚಿವರು) :

ಅ) ಭಾರತವು ತನ್ನ ಕೃಷಿ ನೀತಿ ಮತ್ತು ಕಾರ್ಯಕ್ರಮಗಳನ್ನು ಪಾಲಿಸಲು ಇರುವ ಸ್ವಾತಂತ್ರೀಯ ಮತ್ತು ಸಂಯಮವನ್ನು ಪ್ರತಿಕೂಲವಾಗಿ ಬಾಧಿಸುವ ಯಾವ ರೀತಿಯ ಅವಕಾಶವು ಡಂಕಲ್ ಪ್ರಸ್ತಾವನೆಯಲ್ಲಿ ಇರುವುದಿಲ್ಲ. ಆಹಾರ ಭದ್ರತೆ ಮತ್ತು ಆಹಾರ ನಿಧಿಯು ಸಂಪೂರ್ಣತೆ ಈ ವಿಷಯಗಳು ನಮಗೆ ಪ್ರಮುಖ ಅದ್ಯತೆಯಾಗಿರುತ್ತದೆ. ಈ ವಿಷಯಗಳಿಗೆ ಡಂಕಲ್ ಪ್ರಸ್ತಾವನೆಯಲ್ಲಿ ಮಾನ್ಯತೆ ನೀಡಲಾಗಿದೆ.

ಆ) ಇಲ್ಲಾ